ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	943
ಸದಸ್ಯರ ಹೆಸರು	:	ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	20.09.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ</td>
<td>ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ 2020-21 ನೇ ಸಾಲಿನಲ್ಲಿ ಶಾಲಾ ಕಟ್ಟಡ ನಿರ್ಮಾಣ ಮತ್ತು ದುರಸ್ಥಿಗೆ ಬಿಡುಗಡೆಯಾದಂತಹ ಅನುದಾನದ ಮೊತ್ತವೆಷ್ಟು;</td>
<td>
ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ 2020-21ನೇ ಸಾಲಿನಲ್ಲಿ ಶಾಲಾ ಕಟ್ಟಡ ನಿರ್ಮಾಣ ಮತ್ತು ದುರಸ್ಥಿಗೆ ರಾಜ್ಯಬಂಡವಾಳ ವೆಚ್ಚದಡಿ ಈ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿರುತ್ತದೆ.
<table>
<tr><th>ವರ್ಷ</th><th>ಮರು ನಿರ್ಮಾಣಕ್ಕಾಗಿ ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)</th><th>ದುರಸ್ಥಿಗಾಗಿ ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)</th><th>ಒಟ್ಟು ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><td>ಧಾರವಾಡ</td><td>2408.60</td><td>254.00</td><td>2662.60</td></tr>
<tr><td>ಗದಗ</td><td>190.05</td><td>8.00</td><td>198.05</td></tr>
<tr><td>ಹಾವೇರಿ</td><td>646.63</td><td>957.29</td><td>1603.92</td></tr>
<tr><td>ಒಟ್ಟು</td><td>3245.28</td><td>1219.29</td><td>4464.57</td></tr>
</table>

ಕೇಂದ್ರ ಸರ್ಕಾರ ಪುರಸ್ಕೃತ ಸಮಗ್ರ ಶಿಕ್ಷಣ- ಕರ್ನಾಟಕ ಯೋಜನೆಯಡಿ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ 08 ಹೊಸ ಶಾಲಾ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ರೂ.1050.71 ಲಕ್ಷಗಳ ಅನುದಾನದೊಂದಿಗೆ ಕೈಗೆತ್ತಿಕೊಳ್ಳಲಾಗಿದ್ದು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಕಾಮಗಾರಿಗಳ ಅನುಷ್ಠಾನಕ್ಕಾಗಿ ಈಗಾಗಲೇ ರೂ.525.35 ಲಕ್ಷಗಳನ್ನು ಮಾರ್ಚ್ 2021ರಲ್ಲಿ ಬಿಡುಗಡೆಗೊಳಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.
2020-21ನೇ ಸಾಲಿನಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಸಂಬಂಧಿಸಿದಂತೆ, ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿನ ಈ ಕೆಳಕಂಡ ಕೆ.ಪಿ.ಎಸ್ ಶಾಲೆಗಳಿಗೆ ತಲಾ ರೂ.2.00 ಕೋಟಿ ಅನುದಾನದಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಒಟ್ಟು ರೂ. 6.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

</td>
</tr>
</table>

<table>
<tr><td></td><td></td><td>
<table>
<tr><th>ಕ್ರ.ಸಂ</th><th>ಜಿಲ್ಲೆಯ ಹೆಸರು</th><th>ಕೆ.ಪಿ.ಎಸ್ ಹೆಸರು</th><th>ಮಂಜೂರಾದ ಅನುದಾನ (ರೂ.ಕೋಟಿಗಳಲ್ಲಿ)</th><th>ಬಿಡುಗಡೆಯಾದ ಅನುದಾನ (ರೂ.ಕೋಟಿಗಳಲ್ಲಿ)</th></tr>
<tr><td>1</td><td>ಧಾರವಾಡ</td><td>ಕೆ.ಪಿ.ಎಸ್. ಕರಡೀಗುಡ್ಡ</td><td>2.00</td><td>2.00</td></tr>
<tr><td>2</td><td>ಗದಗ</td><td>ಕೆ.ಪಿ.ಎಸ್. ಮುಶಿಗೇರಿ</td><td>2.00</td><td>2.00</td></tr>
<tr><td>3</td><td>ಹಾವೇರಿ</td><td>ಕೆ.ಪಿ.ಎಸ್ಅರೇಮಲ್ಲಾಪುರ</td><td>2.00</td><td>2.00</td></tr>
<tr><td></td><td></td><td>ಒಟ್ಟು</td><td>6.00</td><td>6.00</td></tr>
</table>
</td></tr>
<tr><td>ಆ</td><td>ಸದರಿ ಜಿಲ್ಲೆಗಳಲ್ಲಿ ಈ ರೀತಿ ಬಿಡುಗಡೆಯಾದಂತಹ ಅನುದಾನದಲ್ಲಿ ಶೇಕಡಾ ಎಷ್ಟರ ಪ್ರಮಾಣದಲ್ಲಿ ಅನುದಾನವನ್ನು ವ್ಯಯ ಮಾಡಲಾಗಿದೆ;</td><td>ಬಿಡುಗಡೆಯಾಗಿರುವ ಅನುದಾನದಲ್ಲಿ ಶೇ.100ರಷ್ಟು ವ್ಯಯ ಮಾಡಲಾಗಿದೆ.</td></tr>
<tr><td>ಇ</td><td>ಬಿಡುಗಡೆಯಾದಂತಹ ಅನುದಾನವನ್ನು ಸಮರ್ಪಕವಾಗಿ ಬಳಸಲು ವಿಫಲರಾದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ?</td><td>ಉದ್ಭವಿಸುವುದಿಲ್ಲ.</td></tr>
</table>

ಇಪಿ: **197** ಯೋಸಕ **2021**

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು